ಬಿಡುಗಡೆಯಾದ ಹಣದ ಉಪಯುಕ್ತತೆಯ 31-12-2000ದ ವರೆಗಿನ ವಿವರ (ಕೇಂದ್ರ+ರಾಜ್ಯ ಸೇರಿ)

ಎಸ್.ಜೆ.ಎಸ್.ಆರ್.ವೈ	- ರೂ. 4463.00 ಲಕ್ಷ
ಐ.ಡಿ.ಎಸ್.ಎಂ.ಟಿ.	- ರೂ. 756.89 ಲಕ್ಷ
ಟಿ.ಎಫ್.ಸಿ.	-ರೂ. 4100.00 ಲಕ್ಷ

ಮೆಗಾಸಿಟಿ ಯೋಜನೆ :

ಬೆಂಗಳೂರು ಮೆಗಾಸಿಟಿ ಯೋಜನೆಯ ಅನುದಾನಗಳಿಂದ ವಿವಿಧ ಯೋಜನೆಗಳನ್ನು ಬೆಂಗಳೂರಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕೆಲವು ಯೋಜನೆಗಳು ಈಗಾಗಲೇ ಪೂರ್ಣಗೊಂಡಿರುತ್ತವೆ. ಉದಾ : ಶಿವಾಜಿನಗರ ಬಸ್ ನಿಲ್ದಾಣದ ಪುನರ್ ನಿರ್ಮಾಣ ಯೋಜನೆ, ಸಿಸ್ಕಿ ರಸ್ತೆಯ ಮೇಲು ರಸ್ತೆ ಯೋಜನೆ, ಇಂಟರ್‌ಮೀಡಿಯೇಟ್ ರಿಂಗ್‌ರಸ್ತೆ (ಕೋರಮಂಗಲ) ಮತ್ತು ಔಟರ್‌ರಿಂಗ್ ರಸ್ತೆ (ಸರ್ಜಾಪುರ) ಯೋಜನೆಗಳು ಇನ್ನೂ ಅನೇಕ ಅಭಿವೃದ್ಧಿ ಯೋಜನೆಗಳು ಪ್ರಗತಿಯಲ್ಲಿದೆ.

ಊ) ಇಲ್ಲಾ

ನಗರ ಪ್ರದೇಶದಲ್ಲಿರುವ ಆಸ್ತಿಗಳನ್ನು ಲೀಸಿಗೆ ನೀಡುವುದು

817 (1141) ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣೇಬೆನ್ನೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶಗಳಲ್ಲಿರುವ ನಗರಸಭೆ ಹಾಗೂ ಪುರಸಭೆಗಳ ಆಸ್ತಿಗಳನ್ನು 5 ವರ್ಷಗಳಿಗೆ ಲೀಸ್ ಕೊಟ್ಟು ಪುನಃ 5 ವರ್ಷದ ನಂತರ ಇವುಗಳನ್ನು ನಗರಸಭೆ ಮತ್ತು ಪುರಸಭೆ ವಶಕ್ಕೆ ತೆಗೆದುಕೊಂಡು ಹರಾಜು ಮಾಡಬೇಕೆಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತೀರ್ಪು ಆಗಿರುವುದು ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಈ ದಿಸೆಯಲ್ಲಿ ಕೈಗೊಂಡ ಕ್ರಮ ಏನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಬಂದಿದೆ

ಆ) ಮಾನ್ಯ ಉಚ್ಚ ನ್ಯಾಯಾಲಯವು ರೀಟ್ ಅರ್ಜಿ ಸಂಖ್ಯೆ. 10123:99ರಲ್ಲಿ ದಿನಾಂಕ 30-03-1999ರಂದು ನೀಡಿರುವ ತೀರ್ಪಿನ್ವಯ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ನಗರಸಭೆಗಳ/ಪುರಸಭೆಗಳ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಪೌರಾಡಳಿತ ನಿರ್ದೇಶನಾಲಯದ ಮೂಲಕ ಸಂಖ್ಯೆ.ಪೌನಿ/ಪುರಸಭಾ/ಸಿಬ್ಬಂದಿ/ಸಿಆರ್-6/2000-01 ದಿನಾಂಕ 15-05-2000ದ ಮೇರೆಗೆ ನಿರ್ದೇಶನಗಳನ್ನು ನೀಡಲಾಗಿದೆ.